ಶ್ರೀ ಬಸವರಾಜ ಹೆಚ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವ ಬಗ್ಗೆ ಹುಬ್ಬಳ್ಳಿ ಧಾರವಾಡದಲ್ಲಿ ಪವರ್ ಶಾರ್ಟೇಜ್ ಆಗುವುದರಿಂದ ಅಲ್ಲಿ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಕಮಿಟಿಯಲ್ಲಿ ಕೆಲವು ಪ್ರಸ್ತಾವನೆಗಳನ್ನು ಪಾಸ್ ಮಾಡಿದ್ದಾರೆ, ಕಾರ್ಯರೂಪಕ್ಕೆ ಬಂದಿಲ್ಲ ಎಂಬುದನ್ನು ನನ್ನ ಗಮನಕ್ಕೆ ತರುತ್ತಿದ್ದಾರೆ. ಆ ಕಮಿಟಿಯಲ್ಲಿ ಆದ ವಿಷಯದ ಬಗ್ಗೆ, ಅಲ್ಲಿ ಆಗತಕ್ಕಂತಹ ತೊಂದರೆ ಬಗ್ಗೆ ಆದಷ್ಟು ಬೇಗ ಸರಿಪಡಿಸಲಿಕ್ಕೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅವರಿಗೆ ಇರತಕ್ಕಂತಹ ತೊಂದರೆಯನ್ನು ಸರಿಪಡಿಸುತ್ತೇನೆ.

ಉಡುಪಿ ಜಿಲ್ಲೆಯ ಉಪಗ್ರಾಮದಲ್ಲಿ ಟರ್ನ್‌ಕೀ ಆಧಾರದ ಮೇಲೆ ವಿದ್ಯುದ್ದೀಕರಣ

116(877) ಶ್ರೀ ಗೋಪಾಲ ಪೂಜಾರಿ (ಬೈಂದೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಉಪ ಗ್ರಾಮಗಳಲ್ಲಿ ಟರ್ನ್ ಕೀ ಆಧಾರದ ಮೇಲೆ ಆಗಬೇಕಾಗಿದ್ದ ವಿದ್ಯುದೀಕರಣ ಕಾರ್ಯ ಯಾವ ಹಂತದಲ್ಲಿ ಇದೆ?

ಆ) ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಮುಕ್ತಾಯವಾಗುವುದು?

ಶ್ರೀ ಬಸವರಾಜಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಉಡುಪಿ ಜಿಲ್ಲೆಯ ಉಪ ಗ್ರಾಮಗಳ ವಿದ್ಯುದೀಕರಣ ಕಾಮಗಾರಿಗಳನ್ನು ಟರ್ನ್‌ಕೀ ಆಧಾರದಲ್ಲಿ ಕೆಲಸ ನಿರ್ವಹಿಸಲು ಮೆ: ಸೌದಾಗಾರ್ ಎಲೆಕ್ಟ್ರಿಕಲ್ಸ್, ಭಟ್ಕಳ ಇವರಿಗೆ ಮೆಸ್ಕಾಂ ವತಿಯಿಂದ ಕಚೇರಿ ಪತ್ರ ಸಂಖ್ಯೆ: ಮೆಸ್ಕಾಂ.ಅ.ಇಂ (ತಾಂ) ಕಾನಿಇಂ (ಕ):1000 ದಿನಾಂಕ: 7.11.2002ರಂತೆ ವಹಿಸಿಕೊಡಲಾಗಿರುತ್ತದೆ.

ಆ) ಇದುವರೆಗೆ ಸದರಿ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. ಈ ಕಾಮಗಾರಿಯನ್ನು ಶೀಘ್ರದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಗೋಪಾಲ ಪೂಜಾರಿ :- ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಟರ್ನ್‌ಕಿ ಬೇಸಿಸ್‌ನಲ್ಲಿ ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡುವ ಈ ಸ್ಕೀಮ್ ಏನಿದೆ, ಇದು ಒಂದೂವರೆ ವರ್ಷದ ಹಿಂದೆ ಸ್ಯಾಂಕ್ಷನ್ ಆಗಿದೆ. ಟೆಂಡರ್ ಕರೆಯುವುದಕ್ಕೆ ಎಷ್ಟು ಸಮಯವಾಯಿತು, ಟೆಂಡರ್ ಆದ ಮೇಲೆ ಸಹ ಕಂಟ್ರಾಕ್ಟರ್ ಹತ್ತಿರ ಕೆಲಸ ಪ್ರಾರಂಭ ಮಾಡಿ ಎಂದು ಹೇಳಿದರೆ, ಮೆಟೀರಿಯಲ್ಸ್ ಇಲಾಖೆಯವರು ಬಂದು ಇನ್‌ಸ್ಪೆಕ್ಷನ್ ಮಾಡಿ ಆದೇಶ ಆದರೆ ಮಾತ್ರ ನಾನು ಕೆಲಸ ಪ್ರಾರಂಭ ಮಾಡುತ್ತೇನೆಂದು ಹೇಳಿದ್ದಾರೆ. ಈ ಟರ್ನ್ ಕಿಯನ್ನು ಬಹಳಷ್ಟು ಸಾರಿ ನಾನು ಇಲಾಖೆಯಲ್ಲಿ ಫೋನ್ ಮುಖಾಂತರ ಕೇಳಿದ್ದೇನೆ. ಸಚಿವರಿಂದ ಫೋನ್ ಮಾಡಿಸಿದ್ದೇನೆ. ಇಷ್ಟರತನಕ ಕೆಲಸ ಪ್ರಾರಂಭವಾಗಿಲ್ಲ. ನನ್ನ ಕ್ಷೇತ್ರದಲ್ಲಿ 200 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣವಾಗಿಲ್ಲ. ಆಗಲೇ ಪ್ರಸ್ತಾವನೆ ಕಳುಹಿಸಿದ್ದೇವೆ. ಟರ್ನ್‌ಕೀ ಬೇಸಿಸ್‌ನಲ್ಲಿ ಒಂದೂವರೆ ವರ್ಷದ ಹಿಂದೆ ಸ್ಯಾಂಕ್ಷನ್ ಆದ ಈ ಸ್ಕೀಮ್ ಇನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಾರೆ. ವಿನಃ ನಿಗದಿತ ಸಮಯ ಹೇಳಬೇಕಾಗುತ್ತದೆ. ನನ್ನ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರ. ಇನ್ನು 200 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣ ಆಗಿಲ್ಲ. ಸ್ಯಾಂಕ್ಷನ್ ಆದ ಸ್ಕೀಮ್ ಇಂಪ್ಲಿಮೆಂಟ್ ಆಗುತ್ತಿಲ್ಲ. ಇದನ್ನು ಯಾವ ಹಂತದಲ್ಲಿ ಮಾಡಿಕೊಡುತ್ತೀರಿ ಎಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಪ್ರಕಾರ 7.11.2002ರಂದು ಟರ್ನ್‌ಕಿ ಬೇಸಿಸ್ ಮೇಲೆ ಕಂಟ್ರಾಕ್ಟರ್‌ಗೆ ಕೆಲಸ ವಹಿಸಲಾಗಿದೆ. ನೀವು ಹೇಳಿದ ಪ್ರಕಾರ ಮೆಟೀರಿಯಲ್ ಇನ್‌ಸ್ಪೆಕ್ಷನ್ ಆಗಬೇಕೆಂದು ಕಂಟ್ರಾ ಕ್ಟರ್ ತಮಗೆ ಏನು ಹೇಳಿದ್ದಾರೆ, ಅದು ನಿಜವಾದ ಮಾತು. ಜನವರಿಯಲ್ಲಿ ಆ ಮೆಟೀರಿಲ್ ಇನ್‌ಸ್ಪೆಕ್ಷನ್ ಕೂಡ ಆಗಿದೆ. ಈಗಾಗಲೇ ಅದು ಕೆಲಸ ಪ್ರಾರಂಭ ಮಾಡುವ ಹಂತದಲ್ಲಿ ಇದೆ. ಅದು ಆದಷ್ಟು ಬೇಗ ಕೆಲಸ ಪ್ರಾರಂಭ ಆಗಿ ತಮಗೆ ಆದಷ್ಟು ಬೇಗ ಆ ಕೆಲಸ ಪೂರೈಸಿಕೊಡುತ್ತೇವೆ.

ಶ್ರೀ ಕೆ. ಗೋಪಾಲ ಪೂಜಾರಿ :- ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 200 ಉಪ ಗ್ರಾಮಗಳ ಪ್ರಸ್ತಾವನೆ ನಿಮ್ಮ ಇಲಾಖೆ ಮುಂದೆ ಇದೆ. ಈ ಟರ್ನ್‌ಕಿ ಬೇಸಿಸ್‌ನಲ್ಲಿ ನಮಗೆ ಅನುಮತಿ ಕೊಡುತ್ತೀರಿ ಅಥವಾ ಬೇರೆ ಯಾವ ಸ್ಕೀಮ್‌ನಲ್ಲಿ ಕೊಡುತ್ತೀರಿ? ನನ್ನ ಕ್ಷೇತ್ರದಿಂದ 200 ಉಪ ಗ್ರಾಮಗಳಿಗೆ ವಿದ್ಯುದ್ದೀಕರಣದ ಪ್ರಸ್ತಾವನೆಯನ್ನು ತಮಗೆ ಕಳುಹಿಸಿದ್ದೇವೆ.

ಶ್ರೀ ಬಸವರಾಜ ಹೆಚ್. ಪಾಟೀಲ್ :- ಆ ಯೋಜನೆ ತಮಗೆ ಸ್ಯಾಂಕ್ಷನ್ ಆದ ಮೇಲೆ ಈಗಾಗಲೇ ತಮ್ಮಲ್ಲಿ ಆಗಿರುವ ಕುಂದಾಪುರ 26 ಹ್ಯಾಮೆಲೆಟ್‌ಗಳು ಕಾರ್ಕಳ 50 ಒಟ್ಟು 76 ಮಂಜೂರಾಗಿದೆ. ಅದು ಟರ್ನ್‌ಕಿ ಬೇಸಿಸ್‌ನಲ್ಲಿ ಕೊಡಲಾಗಿದೆ. ಇನ್ನು ಮುಂದೆ ಇರತಕ್ಕಂತಹ ಹ್ಯಾಮಾಲೆಟ್‌ಗಳು ಕೆಪಿಟಿಸಿಎಲ್‌ನಿಂದ ಸರ್ಕಾರದಿಂದ ಮಂಜೂರಾದ ಮೇಲೆ ಟರ್ನ್ ಕಿ ಬೇಸಿಸ್ ಮೇಲೆ ಕೊಡುತ್ತೇವೆ.

ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 11.3.03ರ ಲಿಖಿತ ಮೂಲಕ ಉತ್ತರಿಸುವ 176 ಪ್ರಶ್ನೆಗಳ ಪೈಕಿ 136 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ - 1

ಅಧ್ಯಕ್ಷರು :- ಮಂಡಿಸಲಾಯಿತು.

ಮಾನ್ಯ ಸದಸ್ಯರು :- ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು :- ಈ ಪರಿಪಾಠ ಹೋಗಬೇಕು. 10.30ಕ್ಕೆ ತಾವು ನೋಟಿಸ್ ಕೊಟ್ಟಿದ್ದೀರಿ. ಸರ್ಕಾರಕ್ಕೆ ನಾವು ವಿಷಯ ತಿಳಿಸಬೇಕು. ಬೇಡ? ಹಾಗಿದ್ದರೆ ನೀವು ಉತ್ತರ ಕಂಪೆಲ್ ಮಾಡಬೇಕಾಗಿಲ್ಲ. ಹಾಗಿದ್ದರೆ ಪ್ರಸ್ತಾಪ ಮಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಬಿಜಾಪುರ-ಗದಗ್ ರೈಲ್ವೆ ಮಾರ್ಗದಲ್ಲಿ ಬ್ರಾಡ್‌ಗೇಜ್ ಪರಿವರ್ತನೆ

ಶ್ರೀ ಸಂಗಪ್ಪ ಕಲ್ಲಪ್ಪ ಬೆಳ್ಳುಬ್ಬಿ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೆ, ಬಿಜಾಪುರ ಮತ್ತು ಗದಗ್‌ವರೆಗೆ ಇರತಕ್ಕಂತಹ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತನೆ ಮಾಡಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕಂತಹ ವಿಷಯ. ಇದು ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳನ್ನು ಜೋಡಣೆ ಮಾಡತಕ್ಕಂತಹ ಒಂದು ಪ್ರಮುಖವಾದ ರೈಲು ಮಾರ್ಗ. ಈ ರೈಲು ಮಾರ್ಗವನ್ನು ಕೇರಾಯ್ಡ್ ಯೋಜನೆಯಲ್ಲಿ ರಾಜ್ಯ ಸರ್ಕಾರದ ಅರ್ಧ ಹಣವನ್ನು ಕೊಡುವುದು ಮತ್ತು ಕೇಂದ್ರ ಸರ್ಕಾರ ಅರ್ಧ ಹಣ ಕೊಡುತ್ತದೆ.